ಅಸಲು ದಾವಾ  ನಂ.175/2017
ಪಿ ಡಬ್ಲ್ಯು 1

ದಿನಾಂಕಃ 16-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಪಾಟೀ ಸವಾಲುಃ- ಪ್ರತಿವಾದಿ ನಂ. 1, 2, 4 ರವರ ಪರ ಶ್ರೀ. ವಿ ಕೆ ಕೆ  ವಕೀಲರಿಂದ.**

ವಾಸುದೇವಗೌಡ  ಹಾಗೂ 5 ನೇ ಪ್ರತಿವಾದಿ ಕೂಡಿ ಖರೀದಿ ಕರಾರು ಪತ್ರ ಬರೆಯಿಸಿಕೊಳ್ಳಲು ಹೋಗಿರುವುದಾಗಿ ನಾನು ಹೇಳಿದ್ದು, ಆಗ ದಸ್ತು ಬರಹಗಾರರು ಸಬ್ ರಜಿಸ್ಟರ್ ಆಫೀಸಿನ ಸಮೀಪದಲ್ಲಿರುವ ತಮ್ಮ ಕಚೇರಿಯಲ್ಲಿ ಇದ್ದರು. ದಸ್ತು ಬರಹಗಾರರ ಕಚೇರಿಯಲ್ಲಿ ಇರುವ ಜನರಿಗೂ ಮತ್ತು ಸಬ್ ರಜಿಸ್ಟರ್ ಆಫೀಸಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಬ್ ರಜಿಸ್ಟರ್ ಇವರಿಗೂ ಒಬ್ಬರಿಗೊಬ್ಬರು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ದಸ್ತು ಬರಹಗಾರರು ಉಕ್ತ ಲೇಖನ ಮಾಡುವ ಸಂದರ್ಭದಲ್ಲಿ ನನಗಾಗಲೀ,

ನನ್ನ ಮಗ-ಅಜ್ಜಪ್ಪನಿಗಾಗಲೀ ಅವರಲ್ಲಿಗೆ ಹೋಗಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ. ದಸ್ತನ್ನು ಯಾವ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಎಂದು ನಾನು ಕೇಳಿಲ್ಲ. ಅದೇ ಪ್ರಕಾರ ನನ್ನ ಮಗ ಸಹ ಕೇಳಿಲ್ಲ. ದಸ್ತು ಬರಹಗಾರರು ದಸ್ತು ತಯಾರಿಸಿದ ನಂತರ ನಮ್ಮ ಬಳಿಗೆ ಬಂದಾಗ ನಾವು ಸಬ್ ರಜಿಸ್ಟರ್ ಕಚೇರಿಯ ಬೆಂಚಿನ ಮೇಲೆ 8 ರಿಂದ 10 ಜನರು ಕುಳಿತಿದ್ದು ಇತ್ತು. ದಸ್ತು ಬರಹಗಾರರಿಗೆ ದಸ್ತನ್ನು ಓದಿ ಹೇಳುವಂತೆ ನಾವು ಹೇಳಿರುತ್ತೇವೆ. ಅದನ್ನು ದಸ್ತು ಬರಹಗಾರರು ಓದಿ ಹೇಳಿರುತ್ತಾರೆ. ಸದರಿ ದಸ್ತಿಗೆ ಮೊದಲು ವಾಸುದೇವಗೌಡ ಇವರು ಸಹಿ ಮಾಡಿರುತ್ತಾರೆ. ನಂತರ ಟಾಕನಗೌಡರು ನಂತರದಲ್ಲಿ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ನಾನು ಸಹ ದಸ್ತಿಗೆ ಸಹಿ ಮಾಡಿದ್ದು ಮೇಲೆ ಹೇಳಿದ ಎಲ್ಲರೂ ಸಹಿ ಹಾಕಿದ ನಂತರ ನಾನು ನನ್ನ ಸಹಿ ಮಾಡಿರುತ್ತೇನೆ. ಸದರಿ ಕಾಗದ ಪತ್ರಕ್ಕೆ 5 ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ. ಸಾಕ್ಷಿದಾರರ ಪೈಕಿ ಮೊದಲಿಗೆ ಸ.ಪ. ದ್ಯಾಮನಗೌಡ್ರ ಇವರು ಸಹಿ ಮಾಡಿರುತ್ತಾರೆ. ನಂತರ ಬ.ವಿ. ಸೂರಣಗಿ ಇವರು ಸಹಿ ಮಾಡಿರುತ್ತಾರೆ. ಸದರಿ ಬ.ವಿ. ಸೂರಣಗಿ ಇವರು ಈಗ ಜೀವಿತ ಇರುತ್ತಾರೆ. ಸಾಕ್ಷಿ ಅವರ ಆರೋಗ್ಯ ಸರಿ ಇರುವುದಿಲ್ಲ ಎಂದು ಸ್ವತಃ ನುಡಿಯುತ್ತಾರೆ. ಕೊನೆಯದಾಗಿ ಬಿ.ಎಸ್. ದ್ಯಾಮನಗೌಡ್ರ ಇವರು ಸಹಿ ಮಾಡಿರುತ್ತಾರೆ.

2. ಆ ದಿವಸ ಸಬ್ ರಜಿಸ್ಟರ್ ಕಚೇರಿಯಲ್ಲಿ ನಾವು 3 ಲಕ್ಷ 40 ಸಾವಿರ ಹಣವನ್ನು ವಾಸುದೇವಗೌಡ ಹಾಗೂ ಟಾಕನಗೌಡ ಇವರಿಗೆ ಕೊಟ್ಟಿರುತ್ತೇವೆ. ಆ ದಿವಸ ಹಣ ನೀಡಿದ ನಂತರ ಸದರಿ ವಾಸುದೇವಗೌಡ ಮತ್ತು ಟಾಕನಗೌಡ ಇವರಿಗೆ ಆಸ್ತಿಯನ್ನು ನಮ್ಮ ಸ್ವಾಧೀನಕ್ಕೆ ನೀಡಬೇಕೆಂದು ಕೇಳಿರುತ್ತೇವೆ. ಸ್ವಾಧಿನ ನೀಡಿದ ಬಗ್ಗೆ ದಸ್ತಿನಲ್ಲಿ ಬರೆದಿರುತ್ತಾರೆಯೇ ಎಂಬ ಪ್ರಶ್ನೆಗೆ ಸಾಕ್ಷಿ ಬಹಳ ದಿವಸವಾಯಿತು ನೆನಪಿಗೆ ಬರುತ್ತಿಲ್ಲ ಎಂದು ನುಡಿಯುತ್ತಾರೆ. ದಸ್ತು ಬರಹಗಾರರು ಕರಾರು ಪತ್ರ ಬೆರಳಚ್ಚು ಮಾಡಿಸಿದ ನಂತರದ ಕರಾರು ಪತ್ರವನ್ನು ನಾನು ನೋಡಿಲ್ಲ, ಆದರೆ ನನ್ನ ಮಗ ನೋಡಿರುತ್ತಾರೆ. ನಾನು ನನ್ನ ಮಗನಲ್ಲಿಗೆ ಕರಾರು ಪತ್ರದ ಒಳಾಂಶಗಳನ್ನು ಕೇಳಿದ್ದು ಅವನು ಅದು ಸರಿಯಾಗಿ ಬರೆದಿರುತ್ತಾರೆ ಎಂದು ಹೇಳಿರುತ್ತಾನೆ. ಆಸ್ತಿಯನ್ನು ಸ್ವಾಧೀನ ನೀಡಿದ ಬಗ್ಗೆ ನಾನು ನನ್ನ ಮಗನಲ್ಲಿಗೆ ಕೇಳಿದ್ದು ಆತ ಸ್ವಾಧೀನದ ಬಗ್ಗೆ ಬರೆದಿರುವುದಾಗಿ ಹೇಳಿರುತ್ತಾನೆ.

ದಸ್ತು ತಯಾರಿಸಿದ ಬರಹಗಾರ ಅದಕ್ಕೆ ಸಹಿ ಮಾಡಿರುತ್ತಾನೆ. ಎಲ್ಲರೂ ಸಹಿ ಮಾಡಿದ ನಂತರ ಮತ್ತು ಕಾಗದ ಓದಿ ಹೇಳಿದ ನಂತರ ಹಣ ಕೊಟ್ಟಿರುತ್ತೇವೆ. ದಸ್ತು ಬರೆಯುವಾಗ ನಾನು ಆಸ್ತಿಯ ಮೇಲೆ ಎಷ್ಟು ಭೋಜಾ ಇರುತ್ತದೆ ಎಂಬ ಬಗ್ಗೆ ವಿಚಾರಿಸಿದ್ದು, ಆಗ ಅವರು ಸೊಸೈಟಿಯ 30 ಸಾವಿರ ಭೋಜಾ ಇರುವುದಾಗಿ ಹೇಳಿರುತ್ತಾರೆ. ನಮ್ಮಿಂದ ಹಣ ಪಡೆದುಕೊಂಡ ನಂತರ ಸದರಿ ಭೋಜಾವನ್ನು ಎಷ್ಟು ದಿವಸದ ಒಳಗೆ ತೀರಿಸುತ್ತೀರಿ ಎಂದು ಅವರನ್ನು ಕೇಳಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿ ಹಣ ಪಡೆದುಕೊಂಡಿದ್ದು ಅದನ್ನು ತೀರಿಸುತ್ತೇವೆ ಎಂದು ನುಡಿಯುತ್ತಾರೆ. ನಾವು ಹಣ ನೀಡಿದ ನಂತರ ಭೋಜಾ ಕಡಿಮೆ ಮಾಡಿದ ಬಗ್ಗೆ ವಾಸುದೇವಗೌಡ ಇವರನ್ನು 15 ದಿವಸ ಅಥವಾ 1 ತಿಂಗಳು ಅಥವಾ 2 ತಿಂಗಳು ಅವಧಿಯಲ್ಲಿ ವಿಚಾರಣೆ ಮಾಡಿರುತ್ತೇವೆ. 2 ತಿಂಗಳು ಕಳೆದ ನಂತರ ವಾಸುದೇವಗೌಡ ಇವರಲ್ಲಿ ಭೋಜಾ ಕಡಿಮೆ ಮಾಡಿಸಿಕೊಂಡ ಬಗ್ಗೆ ವಿಚಾರಿಸಿದ್ದು ಆಗ ಅವರು ಇನ್ನೂ ಹೆಚ್ಚಿಗೆ ಹಣ ಬೇಕಾಗಿರುತ್ತದೆ ಕೊಡಬೇಕು ಎಂದು ಹೇಳಿರುತ್ತಾರೆ. 4 ನೇ ತಿಂಗಳಿನಲ್ಲಿ ವಾಸುದೇವಗೌಡ ಮತ್ತು ಟಾಕನಗೌಡ ಇವರು ನನ್ನಿಂದ 1 ಲಕ್ಷ 25 ಸಾವಿರ ಹಣ ಪಡೆದುಕೊಂಡಿರುತ್ತಾರೆ. ಸದರಿ ಹಣವನ್ನು ಸವಣೂರಿನಲ್ಲಿ ಸಬ್ ರಜಿಸ್ಟರ್ ಆಫೀಸಿನಲ್ಲಿ ಭರಪಾಯಿ ಪತ್ರ ಬರೆಯುವಾಗ ಕೊಟ್ಟಿರುತ್ತೇವೆ. ಸದರಿ ಭರಪಾಯಿ ಪತ್ರ ಬೆರಳಚ್ಚು ಮಾಡಿಸಿದ್ದು ಇರುತ್ತದೆ. ಸದರಿ ಭರಪಾಯಿ ಪತ್ರ ಬೆರಳಚ್ಚನ್ನು ಸಪಗಾಯಿ ದಸ್ತು ಬರಹಗಾರರು ಬರೆದಿರುತ್ತಾರೆ. ಆಗ ನಾನು, ನನ್ನ ಮಗ, ವಾಸುದೇವಗೌಡ, ಟಾಕನಗೌಡ ಇವರೆಲ್ಲರೂ ಹಾಜರು ಇದ್ದೆವು. ಭರಪಾಯಿ ಪತ್ರವನ್ನು ಯಾರು ಬೆರಳಚ್ಚು ಮಾಡಿರುತ್ತಾರೆ ಎಂದು ಹೇಳಲು ಬರುವುದಿಲ್ಲ. 1 ಲಕ್ಷ 25 ಸಾವಿರ ಹಣ ನೀಡುವಾಗ 30 ಸಾವಿರ ಭೋಜಾ ಹಣವನ್ನು ತೀರಿಸುವುದಾಗಿ ನಾವು ಹೇಳಿದ್ದು, ಆಗ ಅವರು ಅದನ್ನು ತೀರಿಸುವ ಜವಾಬ್ದಾರಿ ನಮ್ಮದು ತೀರಿಸುತ್ತೇವೆ ಎಂದು ಹೇಳಿರುತ್ತಾರೆ. ಭರಪಾಯಿ ಪತ್ರದಲ್ಲಿ 30 ಸಾವಿರ ಭೋಜಾ ತೀರಿಸುವ ಬಗ್ಗೆ ಬರೆಸಿಲ್ಲ. ಭರಪಾಯಿ ಪತ್ರ ಯಾರು ಬರೆದಿರುತ್ತಾರೆ ಮತ್ತು ಯಾವ ಸ್ಥಳದಲ್ಲಿ ಬರೆದಿರುತ್ತಾರೆ ಎಂದು ಬರೆಸಿಲ್ಲ ಎಂದರೆ ಸರಿ. ಸದರಿ ಭರಪಾಯಿ ಪತ್ರದ ಮೇಲೆ ಸಪಗಾಯಿ ಇವರ ಸಹಿ ಪಡೆಯಲು ಯಾವುದೇ ತೊಂದರೆ ಇರಲಿಲ್ಲ. ಸಾಕ್ಷಿ ವಿಶ್ವಾಸದ ಮೇಲೆ ಹಾಗೇ ಸಹಿ ಪಡೆದುಕೊಂಡಿಲ್ಲ ಎಂದು ನುಡಿಯತ್ತಾರೆ. ಭರಪಾಯಿ ಪತ್ರದಲ್ಲಿಯಾಗಲೀ ಇಲ್ಲವೇ ಕರಾರು ಪತ್ರದಲ್ಲಿಯಾಗಲೀ ಈ

ಹಿಂದೆ ಮಾತುಕತೆಯಲ್ಲಿ ಆದ 10 ಸಾವಿರ ಹಣವನ್ನು 3 ಲಕ್ಷ 50 ಸಾವಿರ ರೂಪಾಯಿಯೊಂದಿಗೆ ತೋರಿಸಿರುತ್ತೇನೆ. ಸದರಿ 10 ಸಾವಿರ ರೂಪಾಯಿಯನ್ನು ಕರಾರು ಪತ್ರದಲ್ಲಿ ಕಾಣಿಸಿರುತ್ತೇನೆ. ಸದರಿ ಕರಾರು ಪತ್ರದಲ್ಲಿ ಈ ಹಿಂದೆ 10 ಸಾವಿರ ರೂಪಾಯಿ ಕೊಟ್ಟಿರುವುದಾಗಿ ಕಾಣಿಸಿಲ್ಲ. ಆ ದಿವಸ 3 ಲಕ್ಷ 50 ಸಾವಿರ ಹಣ ಮುಟ್ಟಿರುವುದಾಗಿ ಖರೀದಿ ಕರಾರು ಪತ್ರದಲ್ಲಿ ಕಾಣಿಸಿದ್ದು ಇರುತ್ತದೆ ಎಂದರೆ ಸರಿ. ಭರಪಾಯಿ ಪತ್ರ ಆದ ನಂತರ ಯಾವಾಗ ಭೋಜಾ ಸಾಲ ತೀರಿಸುವುದಾಗಿ ನಾನು ಗಟ್ಟಿಗೆ ಹಚ್ಚಿ ಕೇಳಿರುತ್ತೇನೆ. ಆಗ ಅವನು ಸಾಲ ತೀರಿಸುವುದು ನಾನು ತೀರಿಸುತ್ತೇನೆ ಎಂದು ಹೇಳಿರುತ್ತಾನೆ. ಭರಪಾಯಿ ಪತ್ರ ಆದ 1, 2 ತಿಂಗಳ ನಂತರ ಅವರಲ್ಲಿ ಸಾಲ ತೀರಿಸಿದ ಬಗ್ಗೆ ಕೇಳಿರುತ್ತೇನೆ.

3. ದಿನಾಂಕ 08-05-2011 ರಂದು ನಾಗನಗೌಡ ಹಾಗೂ ಮಹೇಶಗೌಡ ಇವರ ಮದುವೆಯ ಖರ್ಚಿಗಾಗಿ ಮತ್ತೇ ನನ್ನಲ್ಲಿಗೆ 50 ಸಾವಿರ ಹಣ ಕೇಳಲು ಬಂದಿದ್ದು, ಆಗ ನಾನು ನಮ್ಮದು ಹಣ ತಯಾರು ಇರುತ್ತದೆ ಖರೀದಿಗೆ ಬನ್ನಿರಿ ಹಣ ಪಡೆಯಿರಿ ಅಂತಾ ಹೇಳಿರುವುದಾಗಿ ಹೇಳಿರುತ್ತೇನೆ. ಭೋಜಾ ತೀರಿಸು ಎಂದು ನಾನು ಅವರಲ್ಲಿ ವಿಚಾರಿಸಿದಾಗ ನನಗೆ ಅವರು ಯತಾ ಪ್ರಕಾರ ಭೋಜಾ ನಮ್ಮದು ನಾವು ತೀರಿಸಿಕೊಳ್ಳುತ್ತೇವೆ ಅಂತಾ ಹೇಳಿರುತ್ತಾರೆ. ಅದರ ಕುರಿತು ಬಾಯಿ ಮಾತು ಆಗಿದ್ದು ಯಾವುದೇ ಕಾಗದ ಪತ್ರ ಆಗಿಲ್ಲ. ಭರಪಾಯಿ ಪತ್ರದಲ್ಲಿ ಸಾಲವನ್ನು ನಾನೇ ತೀರಿಸುತ್ತೇನೆ ಎಂಬುವುದಾಗಿ ಅವರ ಕಡೆಯಿಂದ ಬರೆಯಿಸಿಕೊಂಡಿಲ್ಲ. 30 ಸಾವಿರ ಹಣವನ್ನು ನಾನೇ ಸ್ವತಃ ತೀರಿಸಿ ಖರೀದಿ ಪತ್ರ ನೋಂದಣಿ ಮಾಡಿಕೊಳ್ಳಲು ತೊಂದರೆ ಇತ್ತೆ ಎಂಬ ಪ್ರಶ್ನೆ ಪ್ರತಿವಾದಿ ಪರ ವಕೀಲರು ಕೇಳಿದ್ದು ಈಗಾಗಲೇ ಸಾಕ್ಷಿ ಸಾಕಷ್ಟು ಸಲ ಖರೀದಿ ಕರಾರು ಪತ್ರ ಬರೆದುಕೊಟ್ಟುವರೇ ಸಾಲ ತಿರೀಸುವುದಾಗಿ ಹೇಳಿರುವುದರಿಂದ ಈ ಪ್ರಶ್ನೆ ಇನ್ನೊಮ್ಮೆ ಉದ್ಭವಿಸುವುದಿಲ್ಲ ಎಂದು ತಿರಸ್ಕರಿಸಲಾಯಿತು. 50 ಸಾವಿರ ಸಾಲವನ್ನು ಮೆಳ್ಳಾಗಟ್ಟಿ ಗ್ರಾಮದಲ್ಲಿ ಕೊಟ್ಟಿರುತ್ತೇನೆ. ಸದರಿ 50 ಸಾವಿರ ಹಣ ಕೊಟ್ಟ ಬಗ್ಗೆ ಕಾಗದ ಪತ್ರ ಬರೆಯಿಸಿಕೊಂಡಿರುತ್ತೇನೆ. ಸದರಿ ಕಾಗದದ ಮೇಲೆ ಊರು, ಸ್ಥಳ ಬರೆಸಿಲ್ಲ. ಸದರಿ ಕಾಗದ ಪತ್ರ ಬರೆದ ಬಾ.ಬಿ. ಬಾಜಿಗೌಡ್ರ ಇವರು ಈಗ ಜೀವಿತ ಇಲ್ಲ. ಸದರಿ ಕಾಗದ

ಪತ್ರವನ್ನು ವಾಸುದೇವಗೌಡ ಬರೆಯಿಸಿ ಕೊಟ್ಟಿರುತ್ತಾರೆ. ಸದರಿ ಕಾಗದ ಪತ್ರಕ್ಕೆ 4 ಜನ ಸಾಕ್ಷಿದಾರರು ಸಹಿ ಮಾಡಿರುತ್ತಾರೆ.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲವನ್ನು ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು).

ಓ.ಹೆ.ಕೆ.ಸರಿ.ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
ಜೆ ಎಮ್ ಎಫ್ ಸಿ, ಶಿಗ್ಗಾಂವ.
(ಸ್ಥಳಃ ಸವಣೂರ).

1.